## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.1763/2015/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು,ದಿನಾಂಕ: 21.4.2017

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ಹೊಸಕೋಟೆ ತಾಲ್ಲೂಕು ದೇವನಗೊಂದಿ ಗ್ರಾಮದ ಸರ್ವೆ ನಂ.157ರಲ್ಲಿ ನಡೆಯುತ್ತಿರುವ ಅಕ್ರಮ ಕಲ್ಲುಗಣಿಗಾರಿಕೆಯಲ್ಲಿ ಷಾಮೀಲಾದ ಅಧಿಕಾರಿಗಳು, ಗುತ್ತಿಗೆದಾರರು, ಹಾಗೂ ಇತರೆ ಸಂಬಂಧಿತ ವ್ಯಕ್ತಿಗಳ ವಿರುದ್ಧ ಕಾನೂನು ಪ್ರಕಾರ ಸೂಕ್ತ ಕ್ರಮಕೈಗೊಳ್ಳಬೇಕೆಂದು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಕೋರಿ.

*******

ಶ್ರೀ ಹನುಮಂತಪ್ಪ, ತಂದೆ ಯಲ್ಲಪ್ಪ, ಮೇಡಹಳ್ಳಿ ಗ್ರಾಮ, ಆನುಗೊಂಡನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹಾಗೂ (2) ತಹಶೀಲ್ದಾರ್, ಹೊಸಕೋಟೆ ತಾಲ್ಲೂಕು, (ಇನ್ನು ಮುಂದೆ ಕ್ರಮವಾಗಿ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ಹೊಸಕೋಟೆ ತಾಲ್ಲೂಕು ದೇವನಗೊಂದಿ ಗ್ರಾಮದ ಸರ್ವೆ ನಂ.157 ಕ್ಷೇತ್ರ 5 ಎಕರೆ ಜಮೀನಿಗೆ ಪೋಡಿ ದುರಸ್ತಿ ಮಾಡಲು ತಹಶೀಲ್ದಾರ್ ಅವರಿಗೆ 2 ಸಾರಿ ಅರ್ಜಿ ಸಲ್ಲಿಸಿ ಅದಕ್ಕೆ ಬೇಕಾದ ಹಣವನ್ನು ಪಾವತಿಸಿದ್ದು, ಆದರೆ ಇದುವರೆಗೆ ಪೋಡಿ ದುರಸ್ತಿ ಮಾಡಿರುವುದಿಲ್ಲ. ಎಂ.ನಟೇಶ್ ಎನ್ನುವವರು ಮೋಜಣಿದಾರರೊಂದಿಗೆ ಷಾಮೀಲಾಗಿ ಇದೇ ಜಮೀನಿನ ಪಕ್ಕದಲ್ಲಿ ಅಕ್ರಮ ಕಲ್ಲುಗಣಿಗಾರಿಕೆ ಮಾಡುತ್ತಿದ್ದು, ಅವರು ಅದರೊಂದಿಗೆ ದೂರುದಾರರ ಜಮೀನನ್ನೂ ಅತಿಕ್ರಮಿಸಿ ಕಲ್ಲುಗಣಿಗಾರಿಕೆ ಮಾಡುತ್ತಿದ್ದಾರೆ. ಇವರ ಕಲ್ಲುಗಣಿಗಾರಿಕೆ ಲೀಸ್ ಅವಧಿ ಮುಕ್ತಾಯಗೊಂಡಿದ್ದರೂ ಸಹಾ

ಅದನ್ನು ಹಾಗೇ ಮುಂದುವರೆಸಿದ್ದಾರೆ. ಈ ಬಗ್ಗೆ ಕ್ರಮಕೈಗೊಳ್ಳುವಂತೆ ಎದುರುದಾರರಿಗೆ ದೂರು ನೀಡಿದರೂ ಸಹಾ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ದ ಸೂಕ್ತ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೇವನಗೊಂದಿ ಗ್ರಾಮದ ಸರ್ವೆ ನಂ.157ರಲ್ಲಿ ದಿ. 28.8.1991ರಿಂದ ಎಂ.ನಟೇಶ್ ಅವರ ತಂದೆ ಮುನಿಸ್ವಾಮಿಗೌಡ ಅವರು 1 ಎಕರೆ ಪ್ರದೇಶದಲ್ಲಿ ಕಟ್ಟಡ ಕಲ್ಲು ಗಣಿಗಾರಿಕೆ ನಡೆಸಲು 5 ವರ್ಷಗಳ ಅವಧಿಗೆ ಗಣಿಗುತ್ತಿಗೆ ಪಡೆದುಕೊಂಡಿರುತ್ತಾರೆ. ದಿ.27.8.1996ರಿಂದ ಮತ್ತೆ 5 ವರ್ಷಗಳ ಅವಧಿಗೆ ಇದನ್ನು ನವೀಕರಣ ಮಾಡಿಸಿಕೊಂಡಿರುತ್ತಾರೆ. ಎಂ.ನಟೇಶ ಅವರು ದಿ.27.8.2001ರಿಂದ 5 ವರ್ಷಗಳ ಅವಧಿಗೆ 2ನೇ ಬಾರಿ ಗುತ್ತಿಗೆಯನ್ನು ನವೀಕರಿಸಿಕೊಂಡಿದ್ದು, ಇದು ದಿ.26.8.2006ಕ್ಕೆ ಮುಕ್ತಾಯವಾಗಿರುತ್ತದೆ. ಇವರು ಗುತ್ತಿಗೆ ಬಾಕಿ ಹಣ ರೂ.5,25,300/- ಪಾವತಿಸದ ಕಾರಣ ಬೇಬಾಕಿ ವಸೂಲಾತಿಗಾಗಿ ಆರ್‌ಸಿಸಿ ಬರೆಯಲಾಗಿದ್ದು, ಆದರೆ ದಿ.5.6.2014ರಂದು ಬಾಕಿ ಹಣ ಪಾವತಿಸಿರುತ್ತಾರೆ. ದಿ.31.10.2003ರಿಂದ ಪುನ: 5 ವರ್ಷಗಳ ಅವಧಿಗೆ ಕಲ್ಲುಗಣಿಗಾರಿಕೆ ಮಾಡಲು ನಿಯಮಾನುಸಾರ ಅನುಮತಿ ನೀಡಲಾಗಿರುತ್ತದೆ. ಈ ಅವಧಿ ದಿ.30.10.2008ಕ್ಕೆ ಮುಕ್ತಾಯಗೊಂಡಿರುತ್ತದೆ.

4. ಅರ್ಜಿದಾರರಾದ ಡಿ.ಕೆ.ಮಂಜುನಾಥ್ ಅವರು ಸದರಿ ಪ್ರದೇಶದಲ್ಲಿ ಕಟ್ಟಡದ ಕಲ್ಲುಗಣಿಗಾರಿಕೆ ಮುಂದುವರೆಸಲು 2ನೇ ನವೀಕರಣಕ್ಕಾಗಿ ದಿ.26.10.2013ರಂದು ಅರ್ಜಿ ಸಲ್ಲಿಸಿರುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳ ಆದೇಶದಂತೆ ಹಾಗೂ ದೂರುದಾರರ ದೂರಿನಂತೆ ಸ್ಥಳ ತನಿಖೆ ಮಾಡಲಾಗಿದ್ದು, ಎಂ.ನಟೇಶ್ ಅವರ ಗುತ್ತಿಗೆ ಅವದಿ.26.8.2006ರಂದು ಮುಕ್ತಾಯವಾಗಿದ್ದರೂ ಸಹಾ ಅವಧಿ ಮುಕ್ತಾಯವಾದ ನಂತರ ಸುಮಾರು 58,855/- ಮೆಟ್ರಿಕ್ ಟನ್ ಪ್ರಮಾಣದ ಕಟ್ಟಡದ ಕಲ್ಲನ್ನು ಅಕ್ರಮವಾಗಿ ಉತ್ಪಾದಿಸಿ ರವಾನೆ ಮಾಡಿರುವುದರಿಂದ ಇವರಿಗೆ ದಂಡ ಪಾವತಿಸಲು 27.6.2015ರಂದು ನೋಟೀಸು ನೀಡಲಾಗಿದೆ. ಡಿ.ಕೆ.ಮಂಜುನಾಥ್ ಅವರ ಗುತ್ತಿಗೆ ಅವಧಿ ದಿ.26.7.2013ಕ್ಕೆ ಮುಕ್ತಾಯಗೊಂಡಿದ್ದು, ಅವಧಿ ಮುಕ್ತಾಯವಾದ ನಂತರ ಸುಮಾರು 31,741 ಮೆಟ್ರಿಕ್ ಟನ್ ಕಟ್ಟಡದ ಕಲ್ಲನ್ನು ಅಕ್ರಮವಾಗಿ ರವಾನೆ ಮಾಡಿರುವುದರಿಂದ ಇವರಿಗೆ ದಂಡ ಪಾವತಿಸಲು 27.6.2015ರಂದು ನೋಟೀಸು ನೀಡಲಾಗಿದೆ. ಪೋಲೀಸ್ ಠಾಣೆಗಳಲ್ಲಿ ಈ ಇಬ್ಬರು ವ್ಯಕ್ತಿಗಳ ವಿರುದ್ದ ಕ್ರಿಮಿನಲ್ ಪ್ರಕರಣ

ದಾಖಲು ಮಾಡಲಾಗಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

5. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರ ಪೋಡಿಗೆ ಅರ್ಜಿ ಸಲ್ಲಿಸಿದಾಗ ಪೋಡಿಮಾಡಬಾರದೆಂದು ಇದೇ ಸರ್ವೆ ನಂಬರ್‌ಪೈಕಿ ಉಳಿದ ಖಾತೆದಾರರಾದ ವೆಂಕಟಮ್ಮ, ಮಂಜುನಾಥ, ಸುಬ್ರಮಣ್ಯಸ್ವಾಮಿ ತಕರಾರು ಮಾಡಿರುತ್ತಾರೆ. ಆಗ ಅರ್ಜಿಯನ್ನು ವಿಲೇ ಇಡಲಾಗಿರುತ್ತದೆ. ಆನಂತರ ಇನ್ನೊಬ್ಬ ಖಾತೆದಾರ ಡಿ.ಎಸ್.ಕಾಕಣ್ಣ ಅರ್ಜಿ ಸಲ್ಲಿಸಿದ ಮೇರೆಗೆ ಈ ಸರ್ವೆ ನಂಬರನ್ನು ಒಟ್ಟು 4 ಹಿಸ್ಸೆಯಾಗಿ ವಿಂಗಡಿಸಿ ಪೋಡಿಮಾಡಲಾಗಿದೆ. ಒಂದುವೇಳೆ ಈ ಹಿಸ್ಸಾ ಪೋಡಿಗೆ ಸಂಬಂಧಿಸಿದಂತೆ ದೂರುದಾರರು ಭಾಧಿತರಾಗಿದ್ದಲ್ಲಿ, ಈ ಆದೇಶದ ವಿರುದ್ಧ ಡಿಡಿಎಲ್ ಆರ್ ಅವರಿಗೆ ಮೇಲ್ಮನವಿ ಸಲ್ಲಿಸಲು ಸೂಚಿಸಿದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

6. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

7. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ಅಕ್ರಮ ಕಲ್ಲುಗಣಿಗಾರಿಕೆಯು ದೇವನಗುಂದಿ ಗ್ರಾಮದ ಸರ್ವೆ ನಂ.157ರಲ್ಲಿ ನಡೆಯುತ್ತಿದೆಯೆಂದು ಕಂಡುಬರುತ್ತದೆ. ಏಕೆಂದರೆ 1991ರಲ್ಲಿ 1 ಎಕರೆಜಮೀನಿನಲ್ಲಿ ಸರ್ಕಾರದಿಂದ ಪರವಾನಿಗೆ ಪಡೆದು ಮುನಿಸ್ವಾಮಿಗೌಡ ಅವರು ಕಲ್ಲುಗಣಿಗಾರಿಕೆ ಪ್ರಾರಂಭಿಸಿದ್ದು, ಆನಂತರ ಅದನ್ನು ಕಾಲಕಾಲಕ್ಕೆ ನವೀಕರಣ ಮಾಡಿಕೊಂಡಿರುವುದು ಕಂಡುಬರುತ್ತದೆ. ಆದರೆ ಲೀಸ್ ಅವಧಿ ಮುಕ್ತಾಯವಾದ ನಂತರ ಕೆಲವು ವರ್ಷಗಳ ಕಾಲ ಅಕ್ರಮ ಗಣಿಗಾರಿಕೆ ನಡೆಸಿ ಪುನ: ಗುತ್ತಿಗೆಯನ್ನು ನವೀಕರಿಸಿಕೊಂಡಿದ್ದು ಕಂಡುಬರುತ್ತದೆ. ಎಂ.ನಟೇಶ್ ಹಾಗೂ ಡಿ.ಕೆ.ಮಂಜುನಾಥ್ ಅವರು ತಮ್ಮ ಗುತ್ತಿಗೆ ಅವಧಿ ಮುಗಿದ ನಂತರವೂ ಅಕ್ರಮವಾಗಿ ಸುಮಾರು ಕ್ರಮವಾಗಿ 58,855 ಹಾಗೂ 72,759 ಮೆಟ್ರಿಕ್ ಟನ್ ಕಲ್ಲನ್ನು ರವಾನಿಸಿರುವುದಾಗಿ 1ನೇ ಎದುರುದಾರರೇ ಆಕ್ಷೇಪಣೆಯಲ್ಲಿ ನಮೂದಿಸಿರುತ್ತಾರೆ.

8. ದೂರುದಾರರು ಈ ಅಕ್ರಮ ಕಲ್ಲುಗಣಿಗಾರಿಕೆ ಬಗ್ಗೆ ಕ್ರಮಕೈಗೊಳ್ಳಲು ಪದೇಪದೇ ಅರ್ಜಿ ಸಲ್ಲಿಸಿದ ನಂತರ ಮಾನ್ಯ ಜಿಲ್ಲಾಧಿಕಾರಿಗಳು ಈ ಬಗ್ಗೆ ಸ್ಥಳ ತನಿಖೆ ಮಾಡಿ ವರದಿ ಸಲ್ಲಿಸಲು 1ನೇ ಎದುರುದಾರರಿಗೆ ಆದೇಶಿಸಿದ ನಂತರ ಅವರು ಸ್ಥಳತನಿಖೆ ಮಾಡಿದಾಗ ಈ ಅಕ್ರಮ ಕಂಡುಬಂದಿದೆ. ಇದಾದನಂತರ

ಇವರಿಗೆ ದಂಡ ವಿಧಿಸಿ ಅದನ್ನು ಪಾವತಿಸಲು ನೋಟೀಸು ನೀಡಲಾಗಿರುತ್ತದೆ. ಆದರೆ ಎಷ್ಟು ಮೊತ್ತದ ದಂಡ ವಿಧಿಸಲಾಗಿದೆ, ಈ ದಂಡವನ್ನು ಇವರು ಪಾವತಿಸಿದ್ದಾರೆಯೇ ಎನ್ನುವ ಬಗ್ಗೆ ಯಾವುದೇ ದಾಖಲಾತಿಗಳು ಲಭ್ಯವಿರುವುದಿಲ್ಲ.

9. ಶ್ರೀ ಎಂ.ನಟೇಶ್ ಅವರು 26.8.2006ಕ್ಕೆ ಅವರ ಗುತ್ತಿಗೆ ಅವಧಿ ಮುಕ್ತಾಯವಾದ ನಂತರ ಅವರು ಗುತ್ತಿಗೆ ಬಾಕಿ ಹಣ ಸಂದಾಯಮಾಡಿರಲಿಲ್ಲ. ಆಗ ಅವರ ಮೇಲೆ ಕಛೇರಿಯಿಂದ ಆರ್.ಆರ್.ಸಿ ಬರೆಯಲಾಗಿದ್ದು, ಆಗ ಅವರು ರೂ.5,25,300/–ಗಳನ್ನು ದಿ.5.6.2014ರಂದು ಪಾವತಿಸಿರುತ್ತಾರೆಂದು ತಿಳಿಸಲಾಗಿದೆ. ಇಂತಹ ವ್ಯಕ್ತಿಗೆ ಪುನ: ಎದುರುದಾರರು ಲೈಸೆನ್ಸ್ ನವೀಕರಿಸಿ ಕೊಟ್ಟಿರುವುದರಿಂದ ಅವರಿಗೆ ಅಕ್ರಮ ಕಲ್ಲುಗಣಿಗಾರಿಕೆಗೆ ಅವಕಾಶ ಮಾಡಿಕೊಟ್ಟಂತಾಗಿದೆ. ಅಲ್ಲದೆ ಇವರು ಭಾರೀ ಪ್ರಮಾಣದ ಕಲ್ಲನ್ನು ಲೈಸೆನ್ಸ್ ಅವಧಿ ಮುಗಿದ ನಂತರವೂ ಸಾಗಿಸಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟಾಗಿರುವ ಸಾಧ್ಯತೆ ಇರುತ್ತದೆ. ಇಷ್ಟೆಲ್ಲ ಅಕ್ರಮ ನಡೆಯುತ್ತಿದ್ದರೂ ಸಕಾಲದಲ್ಲಿ ಕ್ರಮಕೈಗೊಳ್ಳದೇ ಎದುರುದಾರರು ಈ ಗುತ್ತಿಗೆದಾರರಿಗೆ ಪರೋಕ್ಷವಾಗಿ ಅನುಕೂಲ ಮಾಡಿಕೊಟ್ಟಿದ್ದಾರೆಂದು ಕಂಡುಬರುತ್ತದೆ. ಪದೇಪದೇ ಲೈಸೆನ್ಸ್ ನಿಯಮಾವಳಿಗಳನ್ನು ಉಲ್ಲಂಘಿಸುವುದು, ಅವಧಿ ಮುಗಿಯುವ ಪೂರ್ವದಲ್ಲಿಯೇ ಲೈಸೆನ್ಸ್ ನವೀಕರಿಸಿಕೊಳ್ಳದಿರುವುದು, ಸರ್ಕಾರಕ್ಕೆ ಕಟ್ಟಬೇಕಾದ ಮೊತ್ತವನ್ನು ಸಕಾಲದಲ್ಲಿ ಪಾವತಿಸದಿರುವುದು, ಗುತ್ತಿಗೆ ಅವಧಿ ಮುಗಿದ ನಂತರ ಅಕ್ರಮವಾಗಿ ಕಲ್ಲನ್ನು ಸಾಗಿಸುವುದು, ಇವೆಲ್ಲವುಗಳೂ ನಿರಂತರವಾಗಿ ನಡಿಯುತ್ತಾ ಬಂದಿದ್ದರೂ ಸಹಾ 1ನೇ ಎದುರುದಾರರು ಪರಿಣಾಮಕಾರಿ ಕ್ರಮಕೈಗೊಳ್ಳದಿರುವುದು ಇವರ ಕರ್ತವ್ಯದ ದುರುಪಯೋಗ ಹಾಗೂ ಕರ್ತವ್ಯದಲ್ಲಿಯ ಲೋಪವೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

10. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಹೊಸಕೋಟೆ ದೇವನಗೊಂದಿ ಗ್ರಾಮದ ಸರ್ವೆ ನಂ.157ರಲ್ಲಿ ನಡೆಯುತ್ತಿರುವ ಅಕ್ರಮ ಕಲ್ಲುಗಣಿಗಾರಿಕೆ ಬಗ್ಗೆ ಸ್ಥಳ ಪರಿಶೀಲಿಸಿ, ಎಷ್ಟು ಎಕರೆ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿದೆ ಎನ್ನುವುದನ್ನು ಕಂಡುಹಿಡಿದು, ಇದರಲ್ಲಿ ಷಾಮೀಲಾದ ಅಧಿಕಾರಿಗಳು, ಗುತ್ತಿಗೆದಾರರು, ಹಾಗೂ ಇತರೆ ಸಂಬಂಧಿತ ವ್ಯಕ್ತಿಗಳ ವಿರುದ್ದ ಕಾನೂನು ಪ್ರಕಾರ ಸೂಕ್ತ ಕ್ರಮಕೈಗೊಳ್ಳಬೇಕೆಂದು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 24/4/17.

[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.